
ಗ್ರಾಮ:-ಪಟ್ಟಂದೂರು ಅಗ್ರಹಾರ ನಲ್ಲೂರಹಳ್ಳಿ | ಹೋಬಳಿ:-ಕೆ.ಆರ್.ಪುರ | ತಾಲ್ಲೂಕು:-ಬೆಂಗಳೂರು ಪೂರ್ವ

# ರೀ.ಸ.ನಂ.85 & 4 ರ ಕೆರೆ ಬಾಬ್ತು ನಕ್ಷೆ.




scale
1cm | 16mts

ಷರಾ: ಸರ್ಕಾರಿ ಕೆರೆ

ಪಟ್ಟಂದೂರು ಅಗ್ರಹಾರ ಸ.ನಂ.85

ಆಕಾರ ಬಂದಿನಂತೆ ವಿಸ್ತೀರ್ಣ ಎ-ಗುಂ 18-09

ಅಳತೆಯಂತೆ ವಿಸ್ತೀರ್ಣ 18-09

ನಲ್ಲೂರಹಳ್ಳಿ ಸ.ನಂ.4

ಆಕಾರ ಬಂದಿನಂತೆ ವಿಸ್ತೀರ್ಣ ಎ-ಗುಂ 20-34

ಅಳತೆಯಂತೆ ವಿಸ್ತೀರ್ಣ 20-34

ಷರಾ:- ಮಾನ್ಯ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 38401/2014 ಮತ್ತು 11044/2018 (ಎಲ್.ಬಿ.ಆರ್.ಇ.ಎಸ್-ಪಿಐಎಲ್) ರ ಪ್ರಕರಣಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ದಿನಾಂಕ:21-07-2023, 01-08-2023 ಮತ್ತು 04-09-2023 ರಂದು ನೀಡಿರು ದೈನಂದಿನ ಆದೇಶ/ನಿರ್ದೇಶನದಂತೆ, ಮಾನ್ಯ ಸರ್ಕಾರಿ ಆದೇಶ ಸಂಖ್ಯೆ:ನ.ಅ.ಇ.250 ಎಂ.ಎನ್.ವೈ 2018(ಭಾಗ-3) ಬೆಂಗಳೂರು ದಿನಾಂಕ:28-08-2023 ಹಾಗೂ ಮಾನ್ಯ ತಹಶೀಲ್ದಾರ್ ರವರ ಪತ್ರದ ಸಂಖ್ಯೆ: ಎನ್‌ಸಿಆರ್/ಸಿಆರ್/11/23-24 ದಿನಾಂಕ:17-10-2023, ಮಾನ್ಯ ಭೂದಾಖಲೆಗಳ ಸಹಾಯಕ ನಿರ್ದೇಶಕರವರ ಸಂಖ್ಯೆ ಭೂ.ಸ.ನಿ/(ಪೋ)ಕೆರೆ/11/2023-24 ದಿನಾಂಕ:30-10-2023 ರ ಆದೇಶದ ಮೇರೆಗೆ ಗ್ರಾಮ ಆಡಳಿತ ಅಧಿಕಾರಿಗಳು, ರಾಜಸ್ವ ನಿರೀಕ್ಷಕರು ಮತ್ತು ಕೆರೆಗಳ ಸಂರಕ್ಷಣಾ ಅಭಿಯಂತರರ ಸಮಕ್ಷಮ ಅಳತೆ ಮಾಡಿ ನಕ್ಷೆ ತಯಾರಿಸಿದೆ.

| ಕ್ರಮ ಸಂಖ್ಯೆ | ಬ್ಲಾಕ್ ನಂ. | ಒತ್ತುವರಿದಾರರ ಹೆಸರು | ಒತ್ತುವರಿ ಸ್ವರೂಪ | ವಿಸ್ತೀರ್ಣ | ಷರಾ |
|---|---|---|---|---|---|
| 1 | I | ರಸ್ತೆ | ರಸ್ತೆ | 0-07 | |
| 2 | II | ಸರ್ಕಾರಿ ರಸ್ತೆ | ರಸ್ತೆ | 0-08 | |
| 3 | III | ಬಿ.ಕೆಂಚಪ್ಪ ಬಿನ್ ಭತ್ಯಪ್ಪ | ಕೃಷಿ, ಶೆಡ್ | 2-10 | |
| 4 | IV | ಮುನಿಶಾಮಪ್ಪ ಬಿನ್ ಕೆಂಚಪ್ಪ | ಕೃಷಿ, ಶೆಡ್ | 1-33 | |
| 5 | V | ಕಾಲುವೆ | ಕಾಲುವೆ | 0-05 | |
| 6 | VI | ಭತ್ಯಪ್ಪ ಬಿನ್ ಕೆಂಚಪ್ಪ | ಕೃಷಿ | 1-26 | |
| 7 | VII | ಸರ್ಕಾರಿ ರಸ್ತೆ | ರಸ್ತೆ | 0-38 | |
| 8 | VIII | ವನಿತಾ, ಗೋಪಾಲರೆಡ್ಡಿ, ಯಲ್ಲಾರೆಡ್ಡಿ | ಖಾಲಿ ಜಾಗ, ಪಾರ್ಕ್ | 0-14 | |

ಪಟ್ಟಂದೂರು ಅಗ್ರಹಾರ ಸ.ನಂ.85

| | ಎ-ಗು |
|---|---|
| ಒಟ್ಟು ಖಾಸಗಿ ಒತ್ತುವರಿ ವಿಸ್ತೀರ್ಣ: | 5-29 |
| ಒಟ್ಟು ಸರ್ಕಾರಿ ಒತ್ತುವರಿ ವಿಸ್ತೀರ್ಣ: | 0-20 |
| ಒಟ್ಟು ಖುಲ್ಲಾ ಇರುವ ವಿಸ್ತೀರ್ಣ: | 12-00 |
| ಸರ್ವೇ ನಂಬರಿನ ಒಟ್ಟು ವಿಸ್ತೀರ್ಣ: | 18.09 |

ನಲ್ಲೂರಹಳ್ಳಿ ಸ.ನಂ.4

| | ಎ-ಗು |
|---|---|
| ಒಟ್ಟು ಖಾಸಗಿ ಒತ್ತುವರಿ ವಿಸ್ತೀರ್ಣ: | 0-14 |
| ಒಟ್ಟು ಸರ್ಕಾರಿ ಒತ್ತುವರಿ ವಿಸ್ತೀರ್ಣ: | 0-38 |
| ಒಟ್ಟು ಖುಲ್ಲಾ ಇರುವ ವಿಸ್ತೀರ್ಣ: | 19-17 |
| ಸರ್ವೇ ನಂಬರಿನ ಒಟ್ಟು ವಿಸ್ತೀರ್ಣ: | 20-34 |

ತಯಾರಿಸಿದವರು

ತಾಲ್ಲೂಕು ಭೂಮಾಪಕರು
ಬೆಂ. ಪೂರ್ವ ತಾಲ್ಲೂಕು
ಬೆಂಗಳೂರು

ಶಿರಸ್ತೇದಾರರು
ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ
ಬೆಂಗಳೂರು ಪೂರ್ವ ತಾಲ್ಲೂಕು

ಭೂದಾಖಲೆಗಳ ಸಹಾಯಕ ನಿರ್ದೇಶಕರು
ಬೆಂಗಳೂರು ಪೂರ್ವ ತಾಲ್ಲೂಕು
ಕೆ.ಆರ್. ಪುರ

Scanned with CamScanner

ಕರ್ನಾಟಕ ಸರ್ಕಾರ

**ತಹಶೀಲ್ದಾರ್ ರವರ ಕಾರ್ಯಾಲಯ, ಬೆಂಗಳೂರು ಪೂರ್ವ ತಾಲ್ಲೂಕು, ಕೃಷ್ಣರಾಜಪುರ.**

ಸಂಖ್ಯೆ.ಎಸ್.ಪಿ.ಆರ್./ಪಿ.ಆರ್.11/23-24 ದಿನಾಂಕ;20-12-2023

ರವರಿಗೆ,

ಕಾರ್ಯಪಾಲಕ ಅಭಿಯಂತರರು,
ಮಹದೇವಪುರ ವಿಭಾಗ,
ಫೀನಿಕ್ಸ್ ಮಾರ್ಕೆಟ್ ಸಿಟಿ ಎದುರು,
ವೈಟ್‌ಫೀಲ್ಡ್ ಮುಖ್ಯರಸ್ತೆ, ಮಹದೇವಪುರ.

ಮಾನ್ಯರೆ,

ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವಂತಹ ಕೆರೆಗಳು ಮತ್ತು ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ.

ಉಲ್ಲೇಖ:- 1.ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 38401/2014 ಮತ್ತು 11044/2018(ಎಲ್.ಬಿ-ಆರ್.ಇ.ಎಸ್-ಪಿ.ಐ.ಎಲ್) ರ ಪ್ರಕರಣಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ದಿ: 21-07-2023, 01-08-2023 ಮತ್ತು 04-09-2023 ರಂದು ನೀಡಿರುವ ದೈನಂದಿನ ಆದೇಶ / ನಿರ್ದೇಶದಂತೆ.
2.ಮಾನ್ಯ ಸರ್ಕಾರಿ ಆದೇಶ ಸಂಖ್ಯೆ.ನ.ಅ.ಇ 250 ಎಂ.ಎನ್.ವೈ 2018 (ಭಾಗ-3) ಬೆಂಗಳೂರು. ದಿ: 28-08-2023 (1)
3.ತಮ್ಮ ಕಛೇರಿ ಪತ್ರ ಸಂಖ್ಯೆ.ಬಿಬಿಎಂಪಿ/ಕಾಅ/ಮವಿ/710/2023-24 ದಿ: 17-10-2023
4.ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಪೂರ್ವ ತಾಲ್ಲೂಕು ರವರ ಪತ್ರ ಸಂಖ್ಯೆ.ಭೂ.ಸ.ನಿ/ಪೋಡಿ/ಕೆರೆ/11/2023-24 ದಿ: 03-11-2023

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 38401/2014 ಮತ್ತು 11044/2018(ಎಲ್.ಬಿ-ಆರ್.ಇ.ಎಸ್-ಪಿ.ಐ.ಎಲ್) ರ ಪ್ರಕರಣಗಳಲ್ಲಿ ಮತ್ತು ಇತರೆ ಪ್ರಕರಣಗಳಲ್ಲಿ ದಿ: 21-07-2023, 01-08-2023 ಮತ್ತು 04-09-2023 ರಂದು ನೀಡಿರುವ ದೈನಂದಿನ ಆದೇಶ / ನಿರ್ದೇಶದಂತೆ, ಉಲ್ಲೇಖ(2) ರ ಮಾನ್ಯ ಸರ್ಕಾರಿ ಆದೇಶ ಸಂಖ್ಯೆ.ನ.ಅ.ಇ 250 ಎಂ.ಎನ್.ವೈ 2018 (ಭಾಗ-3) ಬೆಂಗಳೂರು. ದಿ: 28-08-2023 (1) ರಲ್ಲಿ ಸರ್ಕಾರವು ಪಾಲಿಕೆ ವ್ಯಾಪ್ತಿಯಲ್ಲಿನ ಕೆರೆಗಳ ಸಂರಕ್ಷಣೆ ಮತ್ತು ಒತ್ತುವರಿಗಳನ್ನು ತೆರವುಗೊಳಿಸಲು ಸಕ್ಷಮ ಪ್ರಾಧಿಕಾರ / ಗೊತ್ತುಪಡಿಸಿದ ಅಧಿಕಾರಿಗಳನ್ನು ಅಧಿಕೃತಗೊಳಿಸಿ ಆದೇಶವನ್ನು ಹೊರಡಿಸಿರುತ್ತಾರೆ.

Scanned with CamScanner

ಉಲ್ಲೇಖ(3) ರ ಪತ್ರದಲ್ಲಿ ಕೆ.ಆರ್.ಪುರ ಹೋಬಳಿ, ಪಟ್ಟಂದೂರು ಅಗ್ರಹಾರ ಗ್ರಾಮದ ಸ.ನಂ.85 ಮತ್ತು ನಲ್ಲೂರಹಳ್ಳಿ ಗ್ರಾಮದ ಸ.ನಂ.04 ರ ಕೆರೆಗಳನ್ನು ಸ್ಥಳೀಯ ಕಂದಾಯಾಧಿಕಾರಿಗಳೊಂದಿಗೆ ಹಾಗೂ ಬಿಬಿಎಂಪಿ ರವರೊಂದಿಗೆ ಸ್ಥಳ ತನಿಖೆ ಕೈಗೊಂಡು, ಅಳತೆ ಮಾಡಿ ನಕ್ಷೆಯೊಂದಿಗೆ ಒತ್ತುವರಿದಾರರ ಒತ್ತುವರಿಗಳನ್ನು ಗುರುತಿಸಿ, ಸಲ್ಲಿಸಲು ಸೂಚಿಸಿರುವ ಮೇರೆಗೆ, ಉಲ್ಲೇಖ(4) ರಂತೆ ಸ್ಥಳೀಯ ಕಂದಾಯಾಧಿಕಾರಿಗಳು, ಬಿಬಿಎಂಪಿ ಅಧಿಕಾರಿಗಳ ಸಮಕ್ಷಮ ಜಂಟಿ ಅಳತೆ ಮಾಡಿ, ನಕ್ಷೆ ತಯಾರಿಸಿ, ಒತ್ತುವರಿದಾರರ ವಿವರಗಳೊಂದಿಗೆ ನಕ್ಷೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಆದ್ದರಿಂದ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಪಟ್ಟಂದೂರು ಅಗ್ರಹಾರ ಗ್ರಾಮದ ಸ.ನಂ.85 ಮತ್ತು ನಲ್ಲೂರಹಳ್ಳಿ ಗ್ರಾಮದ ಸ.ನಂ.04 ರ ಕೆರೆಯ ಒತ್ತುವರಿದಾರರ ವಿವರದೊಂದಿಗೆ ತಯಾರಿಸಿರುವ ನಕ್ಷೆಯನ್ನು ಈ ಪತ್ರದೊಂದಿಗೆ ಲಗತ್ತಿಟ್ಟು ನಿಯಮಾನುಸಾರ ಕ್ರಮವಹಿಸಲು ಮುಂದಿನ ಕ್ರಮಕ್ಕೆ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,

ತಹಶೀಲ್ದಾರ್,
ಬೆಂಗಳೂರು ಪೂರ್ವ ತಾಲ್ಲೂಕು,
ಕೆ.ಆರ್.ಪುರ.

ಪ್ರತಿಯನ್ನು:-

1. ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ.
2. ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು-2 ಮತ್ತು 3, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ.
3. ವಲಯ ಆಯುಕ್ತರು, ಮಹದೇವಪುರ ವಲಯ, ಮಹದೇವಪುರ ರವರಿಗೆ.
4. ವಲಯ ಜಂಟಿ ಆಯುಕ್ತರು,ಮಹದೇವಪುರ ವಲಯ, ರವರಿಗೆ.
5. ಮುಖ್ಯ ಅಭಿಯಂತರರು, ಬಿಬಿಎಂಪಿ ಮಹದೇವಪುರ ವಲಯ ರವರಿಗೆ.
6. ಕಾರ್ಯಪಾಲಕ ಅಭಿಯಂತರರು (ಕೆರೆಗಳು--ಮಹದೇವಪುರ) 3ನೇ ಮಹಡಿ, ಎನ್.ಆರ್.ಚೌಕ ಬಿಬಿಎಂಪಿ, ಬೆಂಗಳೂರು ರವರಿಗೆ.
7. ಮಾನ್ಯ ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪವಿಭಾಗ, ಬೆಂಗಳೂರು ರವರಿಗೆ.
8. ಕಛೇರಿ ಪ್ರತಿ.

Scanned with CamScanner